**ಎಸ್.ಸಿ.ಸಂಖ್ಯೆಃ10022/2025**
**ಪ್ರಾ.ಸಾ.ಸಂಖ್ಯೆಃ 8**
**ಚಾ.ಸಾ.ಸಂಖ್ಯೆಃ 3**

**ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ**

**ಎಸ್.ಸಿ.ಸಂಖ್ಯೆಃ 10022/2025**

| | |
|---|---|
| ಹೆಸರುಃ | ರವೀಂದ್ರ ಪಾಟೀಲ |
| ತಂದೆಯ ಹೆಸರುಃ | ಬಸವರಾಜ |
| ವಯಸ್ಸುಃ | **50** ವರ್ಷ |
| ಉದ್ಯೋಗಃ | ಒಕ್ಕಲುತನ |
| ವಾಸಃ | ದಾದನಟ್ಟಿ |

**ಸಾಕ್ಷಿಯನ್ನು ದಿಃ 25.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ-**

**1.** ಈಗ ನಾನು ನೋಡುತ್ತಿರುವ ನಿಪಿ-**11, 12** ಹಾಗೂ **14** ಇವುಗಳಿಗೆ ನನ್ನ ಸಹಿಗಳು ಇವೆ. (ಸಹಿಗಳನ್ನು ಕ್ರಮವಾಗಿ ನಿಪಿ-**11**(ಸಿ), **12**(ಸಿ), ಹಾಗೂ **14**(ಸಿ) ಅಂತ ಗುರುತಿಸಲಾಯಿತು). ಪೋಲಿಸರು ಅಲ್ಲಿ ಏನು ಮಾಡಿದರು ಮತ್ತು ನಿಪಿ-**11, 12** ಹಾಗೂ **14** ಗಳಲ್ಲಿ ಯಾಕೆ ಸಹಿ ಪಡೆದರು ಅಂತ ಗೊತ್ತಿಲ್ಲ.

(ಈ ಸಮಯದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರು ಪ್ರತಿಕೂಲ ಪ್ರವೃತ್ತಿಯನ್ನು ತೋರುತ್ತಿದ್ದು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿಕೊಂಡಿದ್ದು ಅದು ನಿಜವೆಂದು ಕಂಡು ಬಂದಿದ್ದರಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು. )

**ಪಾಟಿಸವಾಲು: ಸರ್ಕಾರಿ ಅಭಿಯೋಜಕರಿಂದಃ-**

**1.** ದಿ: **31.01.2023** ರಂದು ಮಧ್ಯಾಹ್ನ **1** ರಿಂದ **2-30** ಗಂಟೆಯ ಅವಧಿಯಲ್ಲಿ ಪೊಲೀಸರು ನನ್ನನ್ನು ಹಾಗೂ ಚಾಸಾ-**2** ರವರನ್ನು ಚಾಸಾ-**1** ರವರ ಜಮೀನಿಗೆ ಕರೆಯಿಸಿ ಚಾಸಾ-**1** ತೋರಿಸಿದಂತೆ ಘಟನಾ ಸ್ಥಳ ಪಂಚನಾಮೆ ನಿಪಿ-**11** ನ್ನು ತಯಾರಿಸಿ, ಸ್ಥಳದಿಂದ ಈಗ ನೋಡುತ್ತಿರುವ ಮುಮಾ-**1** ರಿಂದ **6** ನ್ನು ಜಪ್ತ ಮಾಡಿಕೊಂಡರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿ-**13** ರಂತೆ ಪೋಟೊ ತೆಗೆಸಿದರು ಎಂದರೆ ಸರಿಯಲ್ಲ. ನಂತರ ನಿಪಿ-**12** ರಂತೆ ಪೊಲೀಸರು ನಕಾಶೆ ತೆಗೆದು ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ.

**ಎಸ್.ಸಿ.ಸಂಖ್ಯೆಃ 10022/2025**
**ಪ್ರಾ.ಸಾ.ಸಂಖ್ಯೆಃ 8**
**ಚಾ.ಸಾ.ಸಂಖ್ಯೆಃ 3**

**2.** ಅದೇ ದಿನ ಮಧ್ಯಾಹ್ನ **3-30** ರಿಂದ **4-30** ಗಂಟೆಯವರೆಗೆ ಪೊಲೀಸ್ ಠಾಣೆಗೆ ಕರೆಯಿಸಿ ಅಲ್ಲಿ ಚಾಸಾ**-1** ಹಾಜರುಪಡಿಸಿದ ಮುಮಾ**-7** ರಿಂದ **9** ಇವುಗಳನ್ನು ಜಪ್ತ ಮಾಡಿಕೊಂಡು ನಿಪ**-14** ರಂತೆ ಪಂಚನಾಮೆ ಮಾಡಿ, ನಿಪಿ-**15** ರಂತೆ ಪೊಟೊ ತೆಗೆದರು ಎಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿ ಮೇಲೆ ಹೇಳಿದ ವಸ್ತುಗಳನ್ನು ಜಪ್ತ ಮಾಡಿಕೊಂಡಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿಸವಾಲು: ಆರೋಪಿ ಪರ ವಕೀಲರಿಂದ: ಇಲ್ಲ.</u>**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಸಹಿ/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**